# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 18/03/2022 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1) ಹಾಜರಿದ ಅಧಿಕಾರಿಗಳು:

- ನಾಗರಾಜು, ಜ್ಯೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
- ಮಹೇಶ್, ಬಿ. ಡಬ್ಲ್ಯೂ.ಎಸ್.ಎಸ್.ಬಿ ಇನ್ಸ್‌ಪೆಕ್ಟರ್
- ಲಷ್ಮಣ್ ರಾವ್, ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್

2) ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.

3) ವಿದ್ಯುತ್ ದೀಪ ಮತ್ತು ಬೆಸ್ಕಾಂ: ಇಲ್ಲಿಯವರೆಗೆ ವಾರ್ಡ್ ಕಮಿಟಿ ಸಭೆಗೆ ಸಂಬಂಧಪಟ್ಟವರು ಹಾಜರಿರುವುದಿಲ್ಲ.

4) ಇತರೆ ಸಂಬಂಧಪಟ್ಟ ಇಲಾಖಾ ಸಿಬ್ಬಂದಿಗಳು ಮತ್ತು ಪೋಲಿಸ್ ಠಾಣಾ ಸಿಬ್ಬಂದಿಗಳು ಸಭೆಗೆ ಹಾಜರಿರುವುದಿಲ್ಲ.

5) ಸಭೆಯಲ್ಲಿ ಹಾಜರಿದ ವಾರ್ಡ್ ಸದಸ್ಯರಿಗೆ ವಾರ್ಡ್‌ಗೆ ಹಂಚಿಕೆಯಾದ ಅನುದಾನದ ವಿವರವನ್ನು ನೋಡಲ್ ಅಧಿಕಾರಿಗಳು ತಿಳಿಸಿದರು ಹಾಗೇಯೇ ಕೆಲವೊಂದು ಕಡೇ ವಿದ್ಯುತ್ ದೀಪಗಳು ನಿರ್ವಹಣೆ ಸರಿಯಾಗಿ ನಡೆಯುತ್ತಿಲ್ಲ ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುತ್ತದೆ. ಇದೇ ರೀತಿ ಮುಂದುವರಿದರೇ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ ಪತ್ರ ಬರೆಯಲಾಗುವುದೆಂದು ನೋಡಲ್ ಅಧಿಕಾರಿ ರವರು ಸಭೆಗೆ ತಿಳಿಸಿದರು.

6) ವಾರ್ಡ್ ಸಭೆಗೆ ಅಧಿಕಾರಿಗಳು ಮತ್ತು ಪೋಲಿಸ್ ಸಿಬ್ಬಂದಿಗಳು ಸರಿಯಾಗಿ ಹಾಜರಾಗುತ್ತಿಲ್ಲ ಆದ್ದರಿಂದ ಸಾರ್ವಜನಿಕರ ಕುಂದು-

ಕೊರತೆಗಳು ಸರಿಯಾಗಿ ನಿರ್ವಹಿಸಲು ಸದಸ್ಯವಾಗುತ್ತಿಲ್ಲವೆಂದು ವಾರ್ಡ್ ಸದಸ್ಯರು ನೋಡಲ್ ಅಧಿಕಾರಿಗೆ ತಿಳಿಸಿದರು. ನೋಡಲ್ ಅಧಿಕಾರಿಗಳು ಮತಾನಾಡುತ್ತ ಮುಂದಿನ ಸಭೆಗಳಿಗೆ ಕಡ್ಡಾಯವಾಗಿ ಹಾಜರಿರುವಂತೆ ಮುಂಚಿತವಾಗಿಯೇ ಸಭೆಯ ಸೂಚನಾ ಪತ್ರವನ್ನು ಸಂಬಂಧಪಟ್ಟವರಿಗೆ ನೀಡಬೇಕೆಂದು ವಾರ್ಡ್ ಇಂಜಿನಿಯರ್‌ಗಳಿಗೆ ಸೂಚಿಸಿದರು.

ಅಧ್ಯಕ್ಷರ/ನೋಡಲ್ ಅಧಿಕಾರಿಯ ಅನುಮತಿಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂ.77,
ದತ್ತಾತ್ರೇಯ ದೇವಸ್ಥಾನ ವಾರ್ಡ್

ಪ್ರತಿಯನ್ನು:-

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.